# ಅಜ್ಜಿ ಸಾಕಿದ ಹುಂಜ



ಒಂದು ಊರಿನಲ್ಲಿ ವಯಸ್ಸಾದ ಅಜ್ಜಿಯೊಬ್ಬಳು ವಾಸವಾಗಿದ್ದಳು. ಅವಳು ತನ್ನ ಮನೆಯ ಕೆಲಸಕ್ಕಾಗಿ ಇಬ್ಬರು ಹೆಣ್ಣುಮಕ್ಕಳನ್ನು ಇಟ್ಟುಕೊಂಡಿದ್ದಳಲ್ಲದೆ ಜೊತೆಗೆ ಒಂದು ಹುಂಜವನ್ನು ಸಾಕಿಕೊಂಡಿದ್ದಳು. ಪ್ರತಿದಿನ ಬೆಳಿಗ್ಗೆ ಆ ಹುಂಜ ಸರಿಯಾಗಿ ಐದು ಗಂಟೆಗೆ ಜೋರಾಗಿ ಕೂಗುತ್ತಿತ್ತು. ಆಗ ಆ ಅಜ್ಜಿ ಎದ್ದು ಆ ಇಬ್ಬರು ಹೆಣ್ಣಮಕ್ಕಳನ್ನು ಎಬ್ಬಿಸಿ ಕೆಲಸ ಮಾಡುವಂತೆ ಹೇಳುತ್ತಿದ್ದಳು. ಆದರೆ, ಅವರಿಬ್ಬರಿಗೆ ಇನ್ನೂ ಸ್ವಲ್ಪ ಹೊತ್ತು ಸುಖವಾಗಿ ನಿದ್ರಿಸಬೇಕೆನ್ನಿಸುತ್ತಿತ್ತು. ಅಜ್ಜಿ ಅದಕ್ಕೆಲ್ಲಾ ಆಸ್ಪದ ಕೊಡುತ್ತಿರಲಿಲ್ಲ. ಹೀಗಾಗಿ ಆ ಹೆಣ್ಣುಮಕ್ಕಳು ವಿಪರೀತ ಬೇಸರ ಪಟ್ಟುಕೊಂಡಿದ್ದರು.

ಒಮ್ಮೆ ಅವರಿಗೆ ಹುಂಜವು ಬೆಳಿಗ್ಗೆ ಕೂಗುವುದರಿಂದ ತಾನೇ ಅಜ್ಜಿ ನಮ್ಮನ್ನು ಎಬ್ಬಿಸಿ ಕೆಲಸ ಮಾಡಲು ಹೇಳುವುದು. ಹುಂಜವೇ ಇಲ್ಲದಿದ್ದರೆ ಆಗ ಅಜ್ಜಿ ನಮ್ಮನ್ನು ಅಷ್ಟು ಮುಂಚೆ ಎಬ್ಬಿಸಲು ಸಾಧ್ಯವಾಗುವುದಿಲ್ಲ ಎಂಬ ಯೋಚನೆ ಬಂದಿತು. ಕೂಡಲೇ ಅವರಿಬ್ಬರೂ ಸೇರಿಕೊಂಡು ಅಜ್ಜಿಗೆ ತಿಳಿಯದಂತೆ ಹುಂಜವನ್ನು ದೂರ ತೆಗೆದುಕೊಂಡು ಹೋಗಿ ಸಾಯಿಸಿಬಿಟ್ಟರು. ಇಬ್ಬರು ಮನೆಗೆ ಬಂದವರೇ ಇನ್ನು ಮುಂದೆ ತಾವಿಬ್ಬರೂ ಸುಖವಾಗಿ ನಿದ್ರೆ ಮಾಡಿ ನಿಧಾನವಾಗಿ ಏಳಬಹುದೆಂದು ಲೆಕ್ಕಚಾರ ಹಾಕುತ್ತ ಅಜ್ಜಿಗೆ ಹುಂಜದ ಬಗ್ಗೆ ಯಾವುದೇ ರೀತಿಯ ಅನುಮಾನ ಬಾರದಂತೆ ಆ ರಾತ್ರಿ ನೆಮ್ಮದಿಯಿಂದ ನಿದ್ರಿಸಿದರು.

ಆದರೆ, ಆ ರಾತ್ರಿ ಅವರು ತಾವೆಣಿಸಿದಂತೆ ಸುಖವಾಗಿ ನಿದ್ರಿಸಲು ಸಾಧ್ಯವಾಗಲಿಲ್ಲ. ಅವರ ನೆಮ್ಮದಿ ಮತ್ತಷ್ಟು ಹಾಳಾಯಿತು. ಕಾರಣ ಹುಂಜವಿಲ್ಲದ್ದರಿಂದ ದಿನವೂ ಅವರಿಬ್ಬರನ್ನು ಐದು ಗಂಟೆಗೆ ಎಬ್ಬಿಸುತ್ತಿದ್ದ ಆ ಅಜ್ಜಿಗೆ ಸರಿಯಾದ ಸಮಯದ ಅರಿವು ಇಲ್ಲವಾದ್ದರಿಂದ ಮುಂಜಾನೆ ನಾಲ್ಕು ಗಂಟೆಗೇ ಅವರನ್ನು ಎಬ್ಬಿಸಿ ಕೆಲಸ ಮಾಡಲು ಆಜ್ಞಾಪಿಸಿದಳು. ಆಗ ಅವರಿಗೆ ಇನ್ನೂ ಹೆಚ್ಚು ಬೇಸರವಾಗಿ ತಾವು ಅನ್ಯಾಯವಾಗಿ ಹುಂಜವನ್ನು ಕೊಂದು ಹಾಕಿದವೆಂಬ ತಪ್ಪಿನ ಅರಿವಾಯಿತು. ಅದರೇನು ಕಾಲ ಮಿಂಚಿಹೋಗಿತ್ತು. ಮತ್ತೆ ಅವರು ಪ್ರತಿದಿನ ಮುಂಜಾನೆ ನಾಲ್ಕು ಗಂಟೆಗೇ ಎದ್ದು ಕೆಲಸ ಮಾಡಬೇಕಾದ ಪರಿಸ್ಥಿತಿ ಉಂಟಾಯಿತು.

(ಸಂಗ್ರಹ)

● **ಎಂ.ಕೆ. ಮಂಜುನಾಥ್**